1195/2

॥ ಶ್ರೀ ॥

***********

# ರಾಣೇಬೆನ್ನೂರ ತಾಲೂಕ ಶಿಕ್ಷಣ ಸಂಸ್ಥೆಯ ಪದವಿ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘ (ರಿ) ರಾಣೇಬೆನ್ನೂರು. ತಾ: ರಾಣೇಬೆನ್ನೂರು. ಜಿ:ಹಾವೇರಿ.

*****

ಇದರ

# ನಿಯಮ ಮತ್ತು ನಿಬಂಧನೆಗಳು.

***********

ಶ್ರೀ ಗೌರಿಶಂಕರ : 8151950209.
ಹಾವೇರಿ. 9972267681.

ಗೆ,
ಸಂಘ ಸಂಸ್ಥೆಗಳ ನೋಂದಣಿ ಅಧಿಕಾರಿಗಳು,
ಹಾವೇರಿ ಜಿಲ್ಲೆ, ಹಾವೇರಿ.

**ಪರಿಶಿಷ್ಟ ಎ**
(ನಿಯಮ 3(1)ನ್ನು ನೋಡಿ)

ಮಾನ್ಯರೇ,

**ವಿಷಯ : ರಾಣೇಬೆನ್ನೂರ ತಾಲೂಕ ಶಿಕ್ಷಣ ಸಂಸ್ಥೆಯ ಪದವಿ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘ (ರಿ) ರಾಣೇಬೆನ್ನೂರು. ತಾ: ರಾಣೇಬೆನ್ನೂರು. ಜಿ:ಹಾವೇರಿ.** ಈ ಸಂಘವನ್ನು ನೋಂದಣಿ ಮಾಡುವ ಕುರಿತು.

ನಾವು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಮೇರೆಗೆ ಸಂಘವನ್ನು ನೋಂದಾಯಿಸಲು ನಿವೇದನ ಪತ್ರ ಮತ್ತು ನಿಬಂಧನೆಗಳನ್ನು ಹಾಜರುಪಡಿಸಿರುತ್ತೇವೆ. ಆದ ಕಾರಣ ಸಂಘವನ್ನು ನೋಂದಣಿ ಮಾಡಿಕೊಳ್ಳಲು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

| ಕ್ರ.ಸಂ | ಹೆಸರು | ಪದನಾಮ | ಸಹಿ |
|---|---|---|---|
| 1 | ಶ್ರೀ ಬಿ. ಬಿ. ನಂದ್ಯಾಲ | ಅಧ್ಯಕ್ಷರು | |
| 2 | ಡಾ|| ಎಸ್. ಕೆ. ಪಾಟೀಲ | ಉಪಾಧ್ಯಕ್ಷರು | |
| 3 | ಶ್ರೀ ದಯಾನಂದ .ಪಾ. ಹರಿಹರ | ಕಾರ್ಯದರ್ಶಿ | |
| 4 | ಶ್ರೀ ರವಿ .ಹ. ಪೂಜಾರ | ಸಹ ಕಾರ್ಯದರ್ಶಿ | |
| 5 | ಶ್ರೀ ಬಸವರಾಜ .ಎಂ. ಹುಗ್ಗಿ | ಖಜಾಂಚಿ | |
| 6 | ಶ್ರೀ ಕೆ. ಹೆಚ್. ಬ್ಯಾಡಗಿ | ಸದಸ್ಯರು | |
| 7 | ಶ್ರೀ ಜಿ. ಹೆಚ್. ಪೂಜಾರ | ಸದಸ್ಯರು | |
| 8 | ಶ್ರೀ ವೀರಣ್ಣ .ವಿ. ಹೂಲಿಹಳ್ಳಿ | ಸದಸ್ಯರು | |
| 9 | ಶ್ರೀ ಮಂಜುನಾಥ .ಚ. ಮೂಡಲಗೇರಿ | ಸದಸ್ಯರು | |

ಕಾರ್ಯದರ್ಶಿ

A 24/11/2022

ಅಧ್ಯಕ್ಷರು

ಕಾರ್ಯದರ್ಶಿ
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ|| ಹಾವೇರಿ

ಶ್ರೀಕಲಿಸಿದೆ
ಸಹಕಾರ ಸಂಘಗಳ ಉಪ-ನಿಬಂಧಕರ
ಕಛೇರಿ ಹಾವೇರಿ.

ಅಧ್ಯಕ್ಷರು
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ|| ಹಾವೇರಿ

# ರಾಣೇಬೆನ್ನೂರ ತಾಲೂಕ ಶಿಕ್ಷಣ ಸಂಸ್ಥೆಯ ಪದವಿ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘ (ರಿ) ರಾಣೇಬೆನ್ನೂರು.ತಾ:ರಾಣೇಬೆನ್ನೂರು. ಜಿ:ಹಾವೇರಿ.

## ಸಭೆಯ ನಡುವಳಿಕೆಗಳು

ದಿನಾಂಕ:**18–11–2022** ರಂದು ಸಾಯಂಕಾಲ 06–30 ಘಂಟೆಗೆ ಸರಿಯಾಗಿ ಸಂಘದ ಕಛೇರಿಯಲ್ಲಿ **ಶ್ರೀ ಬಿ.ಬಿ. ನಂದ್ಯಾಲ,** ಇವರ ಘನ ಅಧ್ಯಕ್ಷತೆಯಲ್ಲಿ ಸರ್ವ ಸದಸ್ಯರ ಸಭೆ ಸೇರಿ ನಡೆಸಿದ ಸಭೆಯ ನಡುವಳಿಕೆಗಳು.

| ಕ್ರ.ಸಂ | ವಿಷಯ | ಠರಾವು |
|---|---|---|
| 1 | ಪ್ರಾರ್ಥನೆ | ಸದಸ್ಯರಿಂದ |
| 2 | ಸಂಘವನ್ನು ಪ್ರಾರಂಭಿಸುವ ಹಾಗೂ ಸಂಘದ ಹೆಸರನ್ನು ನಾಮಕರಣ ಮಾಡುವ ಕುರಿತು. | **ರಾಣೇಬೆನ್ನೂರ ತಾಲೂಕ ಶಿಕ್ಷಣ ಸಂಸ್ಥೆಯ ಪದವಿ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘ (ರಿ) ರಾಣೇಬೆನ್ನೂರು. ತಾ: ರಾಣೇಬೆನ್ನೂರು. ಜಿ:ಹಾವೇರಿ.** ಎಂದು ಹೆಸರಿನ ಸಂಘವನ್ನು ಪ್ರರಂಭಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆಯನ್ನು ನೀಡಿತು. |
| 3 | ಸಂಘವನ್ನು ನೋಂದಾಯಿಸುವ ಕುರಿತು. | **ರಾಣೇಬೆನ್ನೂರ ತಾಲೂಕ ಶಿಕ್ಷಣ ಸಂಸ್ಥೆಯ ಪದವಿ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘ (ರಿ) ರಾಣೇಬೆನ್ನೂರು. ತಾ: ರಾಣೇಬೆನ್ನೂರು. ಜಿ:ಹಾವೇರಿ.** ಎಂಬ ಸಂಘವನ್ನು ಜಿಲ್ಲಾ ಸಂಘಗಳ ನೋಂದಣಿ ಕಛೇರಿ, ಹಾವೇರಿ ಜಿಲ್ಲೆ, ಹಾವೇರಿ ಇವರಲ್ಲಿ ನೋಂದಾಯಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆಯನ್ನು ಸೂಚಿಸಿತು. |
| 4 | ಸಂಘದ ಆಡಳಿತ ಮಂಡಳಿ ಸದಸ್ಯರ ಆಯ್ಕೆ ಕುರಿತು. | ಈ ಕೆಳಕಂಡ ಸದಸ್ಯರುಗಳನ್ನು ಆಡಳಿತ ಮಂಡಳಿ ಸದಸ್ಯರೆಂದು ಆಯ್ಕೆ ಮಾಡಲಾಯಿತು. |

| ಕ್ರ.ಸಂ | ಹೆಸರು ಮತ್ತು ವಿಳಾಸ | ಪದನಾಮ |
|---|---|---|
| 1 | ಶ್ರೀ ಬಿ. ಬಿ. ನಂದ್ಯಾಲ | ಅಧ್ಯಕ್ಷರು |
| 2 | ಡಾ॥ ಎಸ್. ಕೆ. ಪಾಟೀಲ | ಉಪಾಧ್ಯಕ್ಷರು |
| 3 | ಶ್ರೀ ದಯಾನಂದ .ಪಾ. ಹರಿಹರ | ಕಾರ್ಯದರ್ಶಿ |
| 4 | ಶ್ರೀ ರವಿ .ಹ. ಪೂಜಾರ | ಸಹ ಕಾರ್ಯದರ್ಶಿ |
| 5 | ಶ್ರೀ ಬಸವರಾಜ .ಎಂ. ಹುಗ್ಗಿ | ಖಜಾಂಚಿ |
| 6 | ಶ್ರೀ ಕೆ. ಹೆಚ್. ಬ್ಯಾಡಗಿ | ಸದಸ್ಯರು |
| 7 | ಶ್ರೀ ಜಿ. ಹೆಚ್. ಪೂಜಾರ | ಸದಸ್ಯರು |
| 8 | ಶ್ರೀ ವೀರಣ್ಣ .ವಿ. ಹೂಲಿಹಳ್ಳಿ | ಸದಸ್ಯರು |
| 9 | ಶ್ರೀ ಮಂಜುನಾಥ .ಚ. ಮೂಡಲಗೇರಿ | ಸದಸ್ಯರು |

| ಕ್ರ.ಸಂ | ವಿಷಯ | ಠರಾವು |
|---|---|---|
| 5 | ಸಂಘವನ್ನು ನೋಂದಾಯಿಸುವ ಅಧಿಕಾರವನ್ನು ನೀಡುವ ಕುರಿತು. | ನಮ್ಮ ಸಂಘದ ನೋಂದಣಿಯನ್ನು ಜಿಲ್ಲಾ ಸಂಘಗಳ ನೋಂದಣಿ ಅಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ ಇವರಲ್ಲಿ ನೋಂದಣಿ ಮಾಡಿಸಲು ಹಾಗೂ ಸಂಘದ ಬಗ್ಗೆ ವ್ಯವಹರಿಸಲು ಈ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಇವರಿಗೆ ಅಧಿಕಾರ ನೀಡಿ ಸಭೆಯು ತೀರ್ಮಾನಿಸಿತು. |
| 6 | ಅಧ್ಯಕ್ಷರ ಅಪ್ಪಣೆಯ ಮೇರೆಗೆ ಬಂದ ಇತರೆ ವಿಷಯಗಳು. | ಅಧ್ಯಕ್ಷರ ಅಪ್ಪಣೆಯ ಮೇರೆಗೆ ಯಾವುದೇ ವಿಷಯಗಳು ಚರ್ಚೆಗೆ ಬರದೇ ಇರುವುದರಿಂದ, ವಂದನಾರ್ಪಣೆಯೊಂದಿಗೆ ಸಭೆಯನ್ನು ವಿಸರ್ಜಿಸಲಾಯಿತು. |

ಅಸಲು ಪ್ರಕಾರ ನಕಲು.

ಕಾರ್ಯದರ್ಶಿ

ಕಾರ್ಯದರ್ಶಿ
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ

ಹಳೆಯ ವಿದ್ಯಾರ್ಥಿಗಳ ಸಂಘ ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು
581115.
ಜಿ॥ ಹಾವೇರಿ

ಅಧ್ಯಕ್ಷರು

ಅಧ್ಯಕ್ಷರು
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ

**ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 3 ರ ಪ್ರಕಾರ,**

# ಸಮ್ಮತಿ ಪತ್ರ

## ರಾಣೇಬೆನ್ನೂರ ತಾಲೂಕ ಶಿಕ್ಷಣ ಸಂಸ್ಥೆಯ ಪದವಿ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘ (ರಿ) ರಾಣೇಬೆನ್ನೂರು. ತಾ:ರಾಣೇಬೆನ್ನೂರು. ಜಿ:ಹಾವೇರಿ.

ಮೇಲ್ಕಂಡ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ನಾವುಗಳು ಪ್ರಮಾಣ ಪೂರ್ವಕವಾಗಿ ಹೇಳುವುದೇನೆಂದರೇ, ನಮ್ಮ ಸಂಘಕ್ಕೆ ಬರಬಹುದಾದ ವಂತಿಗೆ, ದೇಣಿಗೆ ಹಾಗೂ ಯಾವುದೇ ರೀತಿಯಿಂದ ಬಂದ ಆದಾಯವನ್ನು ಸಂಘದ ಉದ್ದೇಶಗಳಿಗೆ ಮಾತ್ರ ಉಪಯೋಗಿಸುತ್ತೇವೆ. ಹೊರತು ನಮ್ಮ ಸಂಘದ ಸದಸ್ಯರುಗಳಲ್ಲಿ ಹಂಚಿಕೆ ಮಾಡುವುದಿಲ್ಲವೆಂದು ಈ ಮೂಲಕ ಪ್ರಮಾಣ ಪೂರ್ವಕವಾಗಿ ದೃಢೀಕರಿಸುತ್ತೇವೆ.

| ಕ್ರ.ಸಂ | ಹೆಸರು | ಪದನಾಮ | ಸಹಿ |
|---|---|---|---|
| 1 | ಶ್ರೀ ಬಿ. ಬಿ. ನಂದ್ಯಾಲ | ಅಧ್ಯಕ್ಷರು | [signature] |
| 2 | ಡಾ॥ ಎಸ್. ಕೆ. ಪಾಟೀಲ | ಉಪಾಧ್ಯಕ್ಷರು | [signature] |
| 3 | ಶ್ರೀ ದಯಾನಂದ .ಪಾ. ಹರಿಹರ | ಕಾರ್ಯದರ್ಶಿ | [signature] |
| 4 | ಶ್ರೀ ರವಿ .ಹ. ಪೂಜಾರ | ಸಹ ಕಾರ್ಯದರ್ಶಿ | [signature] |
| 5 | ಶ್ರೀ ಬಸವರಾಜ .ಎಂ. ಹುಗ್ಗಿ | ಖಜಾಂಚಿ | [signature] |
| 6 | ಶ್ರೀ ಕೆ. ಹೆಚ್. ಬ್ಯಾಡಗಿ | ಸದಸ್ಯರು | [signature] |
| 7 | ಶ್ರೀ ಜಿ. ಹೆಚ್. ಪೂಜಾರ | ಸದಸ್ಯರು | [signature] |
| 8 | ಶ್ರೀ ವೀರಣ್ಣ .ವಿ. ಹೂಲಿಹಳ್ಳಿ | ಸದಸ್ಯರು | [signature] |
| 9 | ಶ್ರೀ ಮಂಜುನಾಥ .ಚ. ಮೂಡಲಗೇರಿ | ಸದಸ್ಯರು | [signature] |

ಕಾರ್ಯದರ್ಶಿ

ಕಾರ್ಯದರ್ಶಿ
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ

ಹಳೆಯ ವಿದ್ಯಾರ್ಥಿಗಳ ಸಂಘ * ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ * ರಾಣೇಬೆನ್ನೂರು 581115. ಜಿ॥ ಹಾವೇರಿ

ಅಧ್ಯಕ್ಷರು

ಅಧ್ಯಕ್ಷರು
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ

# ರಾಣೇಬೆನ್ನೂರ ತಾಲೂಕ ಶಿಕ್ಷಣ ಸಂಸ್ಥೆಯ ಪದವಿ ಮಹಾವಿದ್ಯಾಲಯದ
# ಹಳೆಯ ವಿದ್ಯಾರ್ಥಿಗಳ ಸಂಘ (ರಿ) ರಾಣೇಬೆನ್ನೂರು.ತಾ:ರಾಣೇಬೆನ್ನೂರು. ಜಿ:ಹಾವೇರಿ.

## ಕಾರ್ಯಕಾರಿ ಆಡಳಿತ ಮಂಡಳಿ ಸದಸ್ಯರು

| ಕ್ರ.ಸಂ | ಹೆಸರು ಮತ್ತು ವಿಳಾಸ | ಪದನಾಮ | ವಯಸ್ಸು | ಉದ್ಯೋಗ | ಸಹಿ |
|---|---|---|---|---|---|
| 1 | ಶ್ರೀ ಬಿ. ಬಿ. ನಂದ್ಯಾಲ<br>ಸಾ॥ನೆಹರು ಮಾರ್ಕೇಟ್, ರಾಣೇಬೆನ್ನೂರು. | ಅಧ್ಯಕ್ಷರು | 72 | ಪ್ರಾಂಶುಪಾಲರು | |
| 2 | ಡಾ॥ ಎಸ್. ಕೆ. ಪಾಟೀಲ<br>ಸಾ॥ಶಬರಿನಗರ, ರಾಣೇಬೆನ್ನೂರು. | ಉಪಾಧ್ಯಕ್ಷರು | 53 | ಪ್ರಾಂಶುಪಾಲರು | |
| 3 | ಶ್ರೀ ದಯಾನಂದ .ಪಾ. ಹರಿಹರ<br>ಸಾ॥ಕುರುಬಗೇರಿ, ರಾಣೇಬೆನ್ನೂರು. | ಕಾರ್ಯದರ್ಶಿ | 40 | ಪ್ರಾಂಶುಪಾಲರು | |
| 4 | ಶ್ರೀ ರವಿ .ಹ. ಪೂಜಾರ<br>ಸಾ॥ಚೌಡೇಶ್ವರಿನಗರ, ರಾಣೇಬೆನ್ನೂರು. | ಸಹ ಕಾರ್ಯದರ್ಶಿ | 45 | ಉದ್ಯಮಿ | |
| 5 | ಶ್ರೀ ಬಸವರಾಜ .ಎಂ. ಹುಗ್ಗಿ<br>ಸಾ॥ಹಲಗೇರಿ ರಸ್ತೆ, ರಾಣೇಬೆನ್ನೂರು. | ಖಜಾಂಚಿ | 45 | ಸಹಾಯಕ ಪ್ರಾಧ್ಯಾಪಕರು | |
| 6 | ಶ್ರೀ ಕೆ. ಹೆಚ್. ಬ್ಯಾಡಗಿ<br>ಸಾ॥ಈಶ್ವರನಗರ, ರಾಣೇಬೆನ್ನೂರು. | ಸದಸ್ಯರು | 55 | ಪ್ರಾಧ್ಯಾಪಕರು | |
| 7 | ಶ್ರೀ ಜಿ. ಹೆಚ್. ಪೂಜಾರ<br>ಸಾ॥ತೆಲಗಿ. ತಾ॥ಹರಪನಹಳ್ಳಿ. ಜಿ॥ದಾವಣಗೇರೆ | ಸದಸ್ಯರು | 35 | ಪ್ರಾಧ್ಯಾಪಕರು | |
| 8 | ಶ್ರೀ ವೀರಣ್ಣ .ವಿ. ಹೂಲಿಹಳ್ಳಿ<br>ಸಾ॥ವಿನಾಯಕನಗರ, ರಾಣೇಬೆನ್ನೂರು. | ಸದಸ್ಯರು | 53 | ಉದ್ಯಮಿ | |
| 9 | ಶ್ರೀ ಮಂಜುನಾಥ .ಚ. ಮೂಡಲಗೇರಿ<br>ಸಾ॥ವಿಕಾಸನಗರ, ರಾಣೇಬೆನ್ನೂರು. | ಸದಸ್ಯರು | 33 | ಉಪನ್ಯಾಸಕರು | |

ಕಾರ್ಯದರ್ಶಿ
ಕಾರ್ಯದರ್ಶಿ
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ

ಹಳೆಯ ವಿದ್ಯಾರ್ಥಿಗಳ ಸಂಘ ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು
581115.
ಜಿ॥ ಹಾವೇರಿ

ಅಧ್ಯಕ್ಷರು
ಅಧ್ಯಕ್ಷರು
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ

# ರಾಣೇಬೆನ್ನೂರ ತಾಲೂಕ ಶಿಕ್ಷಣ ಸಂಸ್ಥೆಯ ಪದವಿ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘ (ರಿ) ರಾಣೇಬೆನ್ನೂರು.ತಾ:ರಾಣೇಬೆನ್ನೂರು. ಜಿ:ಹಾವೇರಿ.

## ನಿವೇದನೆ ಪತ್ರಿಕೆ ಒಪ್ಪಿ ಸಹಿ ಮಾಡಿದವರು

| ಕ್ರ.ಸಂ | ಹೆಸರು ಮತ್ತು ವಿಳಾಸ | ಪದನಾಮ | ವಯಸ್ಸು | ಉದ್ಯೋಗ | ಸಹಿ |
|---|---|---|---|---|---|
| 1 | ಶ್ರೀ ಬಿ. ಬಿ. ನಂದ್ಯಾಲ<br>ಸಾ॥ನೆಹರು ಮಾರ್ಕೆಟ್, ರಾಣೇಬೆನ್ನೂರು. | ಅಧ್ಯಕ್ಷರು | 72 | ಪ್ರಾಂಶುಪಾಲರು | |
| 2 | ಡಾ॥ ಎಸ್. ಕೆ. ಪಾಟೀಲ<br>ಸಾ॥ಶಬರಿನಗರ, ರಾಣೇಬೆನ್ನೂರು. | ಉಪಾಧ್ಯಕ್ಷರು | 53 | ಪ್ರಾಂಶುಪಾಲರು | |
| 3 | ಶ್ರೀ ದಯಾನಂದ .ಪಾ. ಹರಿಹರ<br>ಸಾ॥ಕುರುಬಗೇರಿ, ರಾಣೇಬೆನ್ನೂರು. | ಕಾರ್ಯದರ್ಶಿ | 40 | ಪ್ರಾಂಶುಪಾಲರು | |
| 4 | ಶ್ರೀ ರವಿ .ಹ. ಪೂಜಾರ<br>ಸಾ॥ಚೌಡೇಶ್ವರಿನಗರ, ರಾಣೇಬೆನ್ನೂರು. | ಸಹ ಕಾರ್ಯದರ್ಶಿ | 45 | ಉದ್ಯಮಿ | |
| 5 | ಶ್ರೀ ಬಸವರಾಜ .ಎಂ. ಹುಗ್ಗಿ<br>ಸಾ॥ಹಲಗೇರಿ ರಸ್ತೆ, ರಾಣೇಬೆನ್ನೂರು. | ಖಜಾಂಚಿ | 45 | ಸಹಾಯಕ ಪ್ರಾಧ್ಯಾಪಕರು | |
| 6 | ಶ್ರೀ ಕೆ. ಹೆಚ್. ಬ್ಯಾಡಗಿ<br>ಸಾ॥ಈಶ್ವರನಗರ, ರಾಣೇಬೆನ್ನೂರು. | ಸದಸ್ಯರು | 55 | ಪ್ರಾಧ್ಯಾಪಕರು | |
| 7 | ಶ್ರೀ ಜಿ. ಹೆಚ್. ಪೂಜಾರ<br>ಸಾ॥ತೆಲಗಿ. ತಾ॥ಹರಪನಹಳ್ಳಿ. ಜಿ॥ದಾವಣಗೇರೆ | ಸದಸ್ಯರು | 35 | ಪ್ರಾಧ್ಯಾಪಕರು | |
| 8 | ಶ್ರೀ ವೀರಣ್ಣ .ವಿ. ಹೂಲಿಹಳ್ಳಿ<br>ಸಾ॥ವಿನಾಯಕನಗರ, ರಾಣೇಬೆನ್ನೂರು. | ಸದಸ್ಯರು | 53 | ಉದ್ಯಮಿ | |
| 9 | ಶ್ರೀ ಮಂಜುನಾಥ .ಚ. ಮೂಡಲಗೇರಿ<br>ಸಾ॥ವಿಕಾಸನಗರ, ರಾಣೇಬೆನ್ನೂರು. | ಸದಸ್ಯರು | 33 | ಉಪನ್ಯಾಸಕರು | |

| ಕ್ರ.ಸಂ | ಸಾಕ್ಷಿದಾರರ ಹೆಸರು ಮತ್ತು ವಿಳಾಸ | ವಯಸ್ಸು | ಉದ್ಯೋಗ | ಸಹಿ |
|---|---|---|---|---|
| 1 | Sri C. N. Pujar, R.T.E.S. College Ranebennur | 52 | ನಿವೃತ್ತ [illegible] | |
| 2 | M.C Agasibagil. | 50 | ವ್ಯವಸಾಯ | |

ಕಾರ್ಯದರ್ಶಿ

ಕಾರ್ಯದರ್ಶಿ
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ

ಹಳೆಯ ವಿದ್ಯಾರ್ಥಿಗಳ ಸಂಘ * ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು
581115.
ಜಿ॥ ಹಾವೇರಿ

ಅಧ್ಯಕ್ಷರು

ಅಧ್ಯಕ್ಷರು
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ

# ನಿವೇದನಾ ಪತ್ರಿಕೆ

| | | | |
|---|---|---|---|
| 1. | ಸಂಘದ ಹೆಸರು | : | ರಾಣೇಬೆನ್ನೂರ ತಾಲೂಕ ಶಿಕ್ಷಣ ಸಂಸ್ಥೆಯ ಪದವಿ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘ (ರಿ) ರಾಣೇಬೆನ್ನೂರು.ತಾ:ರಾಣೇಬೆನ್ನೂರು. ಜಿ:ಹಾವೇರಿ. |
| 2. | ಸಂಘದ ವಿಳಾಸ | : | ಸಾ: ರಾಣೇಬೆನ್ನೂರು. ತಾ:ರಾಣೇಬೆನ್ನೂರು. ಜಿ:ಹಾವೇರಿ. |
| 3. | ಸಂಘದ ಕಾರ್ಯವ್ಯಾಪ್ತಿ | : | ಕರ್ನಾಟಕ ರಾಜ್ಯಾದ್ಯಾಂತ ತನ್ನ ವ್ಯಾಪ್ತಿಯನ್ನು ಹೊಂದಿರುತ್ತದೆ. |

**4. ಸಂಘದ ಧ್ಯೇಯೋದ್ಧೇಶಗಳು :**

1. ಸಂಘದ ವತಿಯಿಂದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು. ಮತ್ತು ಸಾಮಾಜಿಕ, ಸಾಂಕೃತಿಕ, ಶೈಕ್ಷಣಿಕ ಪ್ರಗತಿಯನ್ನು ಮಾಡುವುದು. ಹಾಗೂ ಸ್ಪರ್ಧಾತ್ಮಕ ಸ್ಪರ್ಧೆಗಳನ್ನು ನಡೆಸುವುದು.
2. ಸಂಘದ ವತಿಯಿಂದ ಮಹಾವಿದ್ಯಾಲಯದ ಅಭಿವೃದ್ಧಿ ಹಾಗೂ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಕುಂದು ಕೊರತೆಗಳನ್ನು ನಿವಾರಣೆ ಮಾಡುವಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
3. ಸಂಘದ ವತಿಯಿಂದ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ವಾರ್ಷಿಕ ಸ್ನೇಹ ಸಮ್ಮೇಳನವನ್ನು ಏರ್ಪಡಿಸುವುದು.
4. ಸಂಘದ ವತಿಯಿಂದ ಮಹಾವಿದ್ಯಾಲಯದ ಶಿಕ್ಷಕರು/ಸಿಬ್ಬಂದಿಗಳಿಗೆ ಹಾಗೂ ಊರಿನ ಹಿರಿಯರಿಗೆ ಸನ್ಮಾನಿಸುವುದು.
5. ಸಂಘದ ವತಿಯಿಂದ ಪತ್ರಿಕೆ ವಾಚನಾಲಯ, ಪುಸ್ತಕ ಭಂಡಾರ, ಕಲಾ ಶಾಲೆ ಮತ್ತು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿ, ಇದರ ಮೂಲಕ ವಿದ್ಯಾಪ್ರಸಾರ ಮಾಡುವುದು.
6. ಜನರಲ್ಲಿ ಕ್ರೀಡಾ ಮನೋಭಾವನೆ ಬೆಳೆಸಲು ಅಗತ್ಯವಾದ ಕ್ರೀಡೆಗಳನ್ನು ಆಡಲು ಪ್ರೋತ್ಸಾಹಿಸುವುದು. ತತ್ಸಂಬದ್ಧವಾದ ಕ್ರೀಡಾಕೂಟಗಳನ್ನು, ಸ್ಪರ್ಧೆಗಳನ್ನು ನಡೆಸುವುದು. ಮತ್ತು ಮನರಂಜನಾ ಕ್ರೀಡೆಗಳನ್ನು ನಡೆಸುವುದು.
7. ಸಂಘದ ಸರ್ವತೋಮುಖ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಮತ್ತು ಜನರನ್ನು ಸಾಕ್ಷರಸ್ಥರನ್ನಾಗಿ ಮಾಡುವುದು.
8. ಸಮಾಜದಲ್ಲಿ ಬಡ ವರ್ಗದ ಮಕ್ಕಳ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಹಾಗೂ ಅವರಿಗೆ ಸಾಂತ್ವಾನ/ವಸತಿ ಕೇಂದ್ರ ಇಂತಹ ಸೌಕರ್ಯಗಳನ್ನು ಕಲ್ಪಿಸುವುದು.
9. ಸಂಘದ ವತಿಯಿಂದ ಸ್ವಚ್ಛತೆ, ಆರೋಗ್ಯ ಸೌಲಭ್ಯವನ್ನು ಒದಗಿಸುವುದು. ಹಾಗೂ ಮಾರಕ ರೋಗಗಳನ್ನು ತಡೆಗಟ್ಟುವಲ್ಲಿ ಶಿಬಿರಗಳನ್ನು ನಡೆಸುವುದು.
10. ಸಂಘದ ವತಿಯಿಂದ ಬಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಹಾಯವಾಗುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.
11. ಸಂಘದ ವತಿಯಿಂದ ಎಲ್ಲಾ ರಂಗದ ವಿದ್ಯಾರ್ಥಿಗಳು/ಸಾಧಕರನ್ನು ಸನ್ಮಾನಿಸುವುದು. ಮತ್ತು ಅವರಿಗೆ ಸೂಕ್ತ ಸೌಕರ್ಯಗಳನ್ನು ಒದಗಿಸುವುದು.
12. ಸಂಘದ ಶ್ರೇಯೋಭಿವೃದ್ಧಿಗಾಗಿ ಸಭಾ ಭವನ/ಸಮುದಾಯ ಭವನವನ್ನು ನಿರ್ಮಿಸುವುದು.
13. ಸಂಘದ ಸದಸ್ಯರಲ್ಲಿ ಉಳಿತಾಯ ಮನೋಭಾವನೆ ಮೂಡಿಸುವುದು. ಮತ್ತು ಕುಟುಂಬದ ಯೋಜನೆ, ಆರೋಗ್ಯ ತಿಳುವಳಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
14. ಸಂಘದ ವತಿಯಿಂದ ಪ್ರಾದೇಶಿಕ ಹಬ್ಬ, ರಾಷ್ಟ್ರೀಯ ಹಬ್ಬ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

15. **ಸಂಘದ ಆರ್ಥಿಕ ಸಂಪತ್ತಿನ ಮೂಲಗಳು :–** ಸಂಘದ ಈ ಮೇಲೆ ಹೇಳಿದ ತನ್ನ ಉದ್ದೇಶಗಳ ಸಾಧನೆಗಾಗಿ ಬೇಕಾದ ಆರ್ಥಿಕ ಸಂಪತ್ತನ್ನು ಸಂಗ್ರಹಿಸಬಹುದು. ಮತ್ತು ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ಹೊಂದಬಹುದು.

1. ಸದಸ್ಯರಿಂದ ವಂತಿಗೆ ಅಥವಾ ಚಂದಾ ಹಣ.
2. ಸಾರ್ವಜನಿಕರಿಂದ ಹಾಗೂ ಇತರ ಸಂಘ–ಸಂಸ್ಥೆಗಳಿಂದ ಪಡೆದ ದಾನ, ದೇಣಿಗೆ ಮತ್ತು ಅನುದಾನ.
3. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಸ್ವಾಯತ್ತ ಸಂಸ್ಥೆಗಳು, ಅರೇ ಸರ್ಕಾರಿ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳಿಂದ ಸಾಲ, ಕಾಣಿಕೆ, ಸಹಾಯಧನ ಮತ್ತು ಅನುದಾನ ರೂಪದಲ್ಲಿ ಪಡೆಯಬಹುದು.
4. **ಆದಾಯ :–** ನಮ್ಮ ಸಂಘಕ್ಕೆ ಬರಬಹುದಾದ ಯಾವುದೇ ಆದಾಯ ಅಥವಾ ಲಾಭವನ್ನು ಸಂಘದ ಸದಸ್ಯರಿಗಾಗಲೀ ಅಥವಾ ಬೇರೆಯವರಿಗಾಗಲೀ ಹಂಚಿಕೆ ಮಾಡುವಂತಿಲ್ಲ. ಆದಾಯವನ್ನು ಕೇವಲ ಸಂಘದ ಧೇಯೋದ್ಧೇಶಗಳ ಸಾಧನೆಗೆ ಮತ್ತು ಈಡೇರಿಕೆಗೆ ಮಾತ್ರ ಬಳಸುತ್ತೇವೆಂದು, ಈ ಮೂಲಕ ಧೃಢೀಕರಿಸುತ್ತೇವೆ.

ಕಾರ್ಯದರ್ಶಿ

ಕಾರ್ಯದರ್ಶಿ
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ

ಹಳೆಯ ವಿದ್ಯಾರ್ಥಿಗಳ ಸಂಘ ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು 581115. ಜಿ॥ ಹಾವೇರಿ

ಅಧ್ಯಕ್ಷರು

ಅಧ್ಯಕ್ಷರು
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ

5. **ಅಧಿಕಾರ :-** ನಮ್ಮ ಸಂಘದ ನೋಂದಣಿ ಸಲುವಾಗಿ ಜಿಲ್ಲಾ ಸಂಘ-ಸಂಸ್ಥೆಗಳ ನೋಂದಣಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ ಇವರೊಂದಿಗೆ ವ್ಯವಹರಿಸಲು, ನಮ್ಮ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಇವರಿಗೆ ಸರ್ವ ಸದಸ್ಯರ ಸಭೆಯು ಅನುಮತಿ ನೀಡಿರುತ್ತದೆಂದು. ಈ ಮೂಲಕ ಧೃಢೀಕರಿಸುತ್ತೇವೆ.
6. **ಸೌಲಭ್ಯಗಳ ಮುಕ್ತ ಲಭ್ಯತೆ :-** ಈ ಸಂಘದ ಸೇವೆ ಹಾಗೂ ಸೌಲಭ್ಯಗಳು ಸಮಾಜದ ಎಲ್ಲಾ ಜನರಿಗೂ ಯಾವುದೇ ಜಾತಿ, ವರ್ಗ, ವರ್ಣ, ಲಿಂಗ ಅಥವಾ ಧರ್ಮ ಬೇಧವಿಲ್ಲದೇ ಮುಕ್ತವಾಗಿ ಲಭ್ಯವಿರುತ್ತವೆ.
7. **ತಿದ್ದುಪಡಿ :-** ಈ ನಿಬಂಧನಾ ದಸ್ತಾವೇಜಿಗೆ ಮಾಡಲಾಗುವ ಯಾವುದೇ ತಿದ್ದುಪಡಿಗಳು ಭಾರತೀಯ ಆದಾಯ ತೆರಿಗೆ ಅಧಿನಿಯಮ 1961 ರ ಕಲಂ 2(15), 11, 12, 13, 35 ಎಸಿ ಮತ್ತು 80ಜಿ ಗಳಲ್ಲಿನ ನಿಯಮಗಳಿಗೆ ವಿರುದ್ಧವಾಗಿರಬಾರದು. ಹಾಗೂ ತಿದ್ದುಪಡಿ ಮಾಡುವ ಮುನ್ನ ಭಾರತ ಸರ್ಕಾರದ ಆದಾಯ ತೆರಿಗೆ ಇಲಾಖೆಯಿಂದ ಪೂರ್ವಾನುಮತಿ ಪಡೆದ ನಂತರವೇ ತಿದ್ದುಪಡಿ ಮಾಡತಕ್ಕದ್ದು. ಸಂಘವು ತಾನು ಮಾಡುವ ಹೂಡಿಕೆಗಳನ್ನು 1961 ರ ಆದಾಯ ತೆರಿಗೆ ಸೆಕ್ಷನ್ 13(1)(ಡಿ) ಮತ್ತು 11(5) ರ ಪ್ರಕಾರ ಹೂಡಿಕೆಗಳನ್ನು ಮಾಡತಕ್ಕದ್ದು.

ಕಾರ್ಯದರ್ಶಿ
ಕಾರ್ಯದರ್ಶಿ
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ

ಅಧ್ಯಕ್ಷರು
ಅಧ್ಯಕ್ಷರು
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ

ಹಳೆಯ ವಿದ್ಯಾರ್ಥಿಗಳ ಸಂಘ * ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು
581115.
ಜಿ॥ ಹಾವೇರಿ

# ನಿಯಮ ಮತ್ತು ನಿಬಂಧನೆಗಳು

| | | | |
|---|---|---|---|
| 1. | ಸಂಘದ ಹೆಸರು | : | ರಾಣೇಬೆನ್ನೂರ ತಾಲೂಕ ಶಿಕ್ಷಣ ಸಂಸ್ಥೆಯ ಪದವಿ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘ (ರಿ) ರಾಣೇಬೆನ್ನೂರು.ತಾ:ರಾಣೇಬೆನ್ನೂರು. ಜಿ:ಹಾವೇರಿ. |
| 2. | ಸಂಘದ ವಿಳಾಸ | : | ಸಾ: ರಾಣೇಬೆನ್ನೂರು. ತಾ:ರಾಣೇಬೆನ್ನೂರು. ಜಿ:ಹಾವೇರಿ. |
| 3. | ಸಂಘದ ಕಾರ್ಯವ್ಯಾಪ್ತಿ | : | ಕರ್ನಾಟಕ ರಾಜ್ಯಾದ್ಯಾಂತ ತನ್ನ ವ್ಯಾಪ್ತಿಯನ್ನು ಹೊಂದಿರುತ್ತದೆ. |

**4. ಸದಸ್ಯತ್ವ :**

ಸಂಘದ ಧ್ಯೇಯೋದ್ದೇಶಗಳನ್ನು ಒಪ್ಪಿ ಅವುಗಳ ಸಾಧನೆಗೆ ಬದ್ಧರಾಗಿರುವ, 18 ವರ್ಷ ವಯಸ್ಸಾದ ವಯಸ್ಕರು ಸಂಘದ ಸದ್ಯರಾಗಬಹುದು.

**5. ಸದಸ್ಯತ್ವ ಶುಲ್ಕ :**

ಸಂಘದ ಪ್ರತಿಯೊಬ್ಬ ಸದಸ್ಯರು ಸದಸ್ಯತ್ವ ಶುಲ್ಕ ರೂ.201/-ಗಳು ಮತ್ತು ವರ್ಷಕ್ಕೆ ರೂ.250/-ಗಳನ್ನು ಚಂದಾ ಹಣವೆಂದು ಪಾವತಿಸತಕ್ಕದ್ದು.

**6. ಸದಸ್ಯತ್ವ ಪಡೆಯುವ ವಿಧಾನ :**

ಸಂಘದ ಸದಸ್ಯರಾಗ ಬಯಸುವವರು ಸದಸ್ಯತ್ವ ಕೋರಿಕೆಯ ನಮೂನೆಯನ್ನು ಭರ್ತಿ ಮಾಡಿ, ಪ್ರವೇಶ ಶುಲ್ಕ ರೂ.201/- ಗಳು ಮತ್ತು ವಾರ್ಷಿಕ ಚಂದಾ ಹಣ ರೂ.250/-ಗಳೊಂದಿಗೆ ಸಂಸ್ಥೆಯ ಅಧ್ಯಕ್ಷರಿಗೆ ಸಲ್ಲಿಸತಕ್ಕದ್ದು. ಸಂಘದ ಸದಸ್ಯತ್ವ ನೀಡಿಕೆಯನ್ನು ಸಂಘದ ಕಾರ್ಯಕಾರಿ ಸಮಿತಿ ಸಭೆಯು ಅನುಮೋದಿಸತಕ್ಕದ್ದು.

**7. ಸದಸ್ಯತ್ವ ರದ್ದಾಗುವಿಕೆ :**

1) ಸಂಘದ ಯಾವುದೇ ಸದಸ್ಯರು ಮರಣಹೊಂದಿದರೆ. 2) ಬುದ್ಧಿ ಭ್ರಮಣೆಯಾದರೆ. 3) ಕೋರ್ಟಿನ ಶಿಕ್ಷೆ ಹೊಂದಿ ಅಪರಾಧಿಯಾಗಿದ್ದಲ್ಲಿ. 4) ದಿವಾಳಿಯೆಂದು ಘೋಷಿತವಾಗಿದ್ದಲ್ಲಿ 5) ರಾಜಿನಾಮೆ ಕೊಟ್ಟಲ್ಲಿ ಸದಸ್ಯತ್ವ ಕೊನೆಗೊಳ್ಳುತ್ತದೆ. 6) ಮೂರು ತಿಂಗಳಿಗಿಂತ ಹೆಚ್ಚಿನ ಅವಧಿಯವರೆಗೆ ಚಂದಾ ಹಣ ಬಾಕಿ ಇದ್ದರೆ ಅಂತವರ ಸದಸ್ಯತ್ವ ಅನೂರ್ಜಿತವೆಂದು ಪರಿಗಣಿತವಾಗುತ್ತದೆ.

2) ಯಾವುದೇ ಸದಸ್ಯರು ಸಂಘದ ಹಿತಕ್ಕೆ ವಿರೋಧವಾಗಿ ವರ್ತಿಸುತ್ತಾರೆಂದು ಕಂಡುಬಂದರೆ ಅವರಿಗೆ ಕನಿಷ್ಠ ಪಕ್ಷ 7 ದಿನಗಳ ನೋಟಿಸು ಕೊಟ್ಟು ವಿಚಾರಣೆ ನಡೆಸಿ, ಕಾರ್ಯಕಾರಿ ಸಮಿತಿಯು ಅವರ ಸದಸ್ಯತ್ವವನ್ನು ವಜಾ ಮಾಡಬಹುದು.

**8. ಸದಸ್ಯರ ಮತಾಧಿಕಾರ :**

1) ಸಂಘದ ಎಲ್ಲಾ ರೀತಿಯ ಸಭೆಗಳಲ್ಲೂ ಪ್ರತಿಯೊಬ್ಬ ಸದಸ್ಯನು ಒಂದು ಮತಾಧಿಕಾರವನ್ನು ಹೊಂದಿರುತ್ತಾನೆ. ಮತಾಧಿಕಾರವು ಅರ್ಹ ಸದ್ಯರಿಗೆ ಮಾತ್ರ ಲಭ್ಯವಿರುತ್ತದೆ.

2) ಸರ್ವ ಸದಸ್ಯರ ಸಭೆಯಲ್ಲಿ ಮತ್ತು ಕಾರ್ಯಕಾರಿ ಸಮಿತಿಯ ಚುನಾವಣೆಯಲ್ಲಿ ಭಾಗವಹಿಸುವ ಅಧಿಕಾರವು ತಮ್ಮ ಸದಸ್ಯತ್ವದ ಚಂದಾಹಣವನ್ನು ಪೂರ್ತಿಯಾಗಿ ಸಲ್ಲಿಸಿ, ಮತದಾರರ ಪಟ್ಟಿಯಲ್ಲಿ ಹೆಸರುಳ್ಳ ಸದಸ್ಯರಿಗೆ ಮಾತ್ರ ಇರತಕ್ಕದ್ದು.

**9. ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ :**

ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾಗಿರುತ್ತಾರೆ.

**10. ಸಂಘದ ಸಂಸ್ಥಾಪನಾ ಮಂಡಳಿ :**

ಸಂಘದ ಸದಸ್ಯರೆಂದು ಸಂಘದ ನಿವೇದನಾ ಹಾಗೂ ನಿಯಮ ನಿಬಂಧನೆಗಳಿಗೆ ಸಹಿ ಮಾಡಿರುವವರು ಸಂಘದ ಸ್ಥಾಪನಾ ಮಂಡಳಿ ಅಥವಾ ಪ್ರಥಮ ಕಾರ್ಯಕಾರಿ ಸಮಿತಿ ಸದಸ್ಯರುಗಳೆಂದು ಪರಿಭಾವಿಸಲಾಗಿದೆ. ಈ ಆಡಳಿತ ಮಂಡಳಿಯ ಕಾಲಾವಧಿಯು ಒಂದು ವರ್ಷವಾಗಿದ್ದು, ಸಂಘವು ನೋಂದಣಿ ದಿನಾಂಕದಿಂದ ಆಡಳಿತ ನಡೆಸಲು ಅಧಿಕಾರವುಳ್ಳದ್ದಾಗಿರುತ್ತದೆ.

**11. ಸಂಘದ ಅಧಿಕಾರ ವರ್ಗ :**

ಸಂಘದ ದೈನಂದಿನ ಆಡಳಿತ ನಿರ್ವಹಣೆಗೆ **09** ಜನರ ಕಾರ್ಯಕಾರಿ ಸಮಿತಿ ಇದ್ದು, ಅದರಲ್ಲಿ ಒಬ್ಬರು ಅಧ್ಯಕ್ಷರು, ಒಬ್ಬರು ಉಪಾಧ್ಯಕ್ಷರು, ಒಬ್ಬರು ಕಾರ್ಯದರ್ಶಿ, ಒಬ್ಬರು ಸಹ ಕಾರ್ಯದರ್ಶಿ, ಒಬ್ಬರು ಖಜಾಂಚಿ ಮತ್ತು **04** ಜನ ಕಾರ್ಯಕಾರಿ ಆಡಳಿತ ಮಂಡಳಿ ಸದಸ್ಯರುಗಳಿಂದ ಕೂಡಿರುತ್ತದೆ.

**12. ಕಾರ್ಯಕಾರಿ ಸಂಘದ (ಆಡಳಿತ ಮಂಡಳಿಯ) ಆಯ್ಕೆ, ಕಾಲಾವಧಿ, ಅಧಿಕಾರ ಮತ್ತು ಕರ್ತವ್ಯಗಳು :**

1) ಕಾರ್ಯಕಾರಿ ಸಮಿತಿ ಸದಸ್ಯರನ್ನು ಸರ್ವ ಸದಸ್ಯರ ಸಭೆಯು ಆಯ್ಕೆ ಮಾಡುತ್ತದೆ. ಕಾರ್ಯಕಾರಿ ಸಮಿತಿಯ ಕಾಲಾವಧಿಯು ಒಂದು ವರ್ಷವಾಗಿರುತ್ತದೆ. ಎಲ್ಲಾ ಸದಸ್ಯರು ಮರು ಆಯ್ಕೆಗೆ ಮತ್ತು ಮರು ನೇಮಕಕ್ಕೆ ಅರ್ಹರಿರುತ್ತಾರೆ.

2) ಕಾರ್ಯಕಾರಿ ಸಮಿತಿಯು ಯಾವಾಗ ಬೇಕಾದರೂ ಸಭೆ ಸೇರಬಹುದು. ಆದರೆ ಕನಿಷ್ಠ ಮೂರು ತಿಂಗಳಿಗೊಮ್ಮೆಯಾದರೂ ಸಭೆ ಸೇರಬೇಕು.

ಕಾರ್ಯದರ್ಶಿ

ಕಾರ್ಯದರ್ಶಿ
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ|| ಹಾವೇರಿ

ಹಳೆಯ ವಿದ್ಯಾರ್ಥಿಗಳ ಸಂಘ ರಾಣೇಬೆನ್ನೂರು 581115. ಜಿ|| ಹಾವೇರಿ ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ

ಅಧ್ಯಕ್ಷರು

ಅಧ್ಯಕ್ಷರು
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ|| ಹಾವೇರಿ

3) ಸಂಘದ ಸ್ಥಿರ–ಚರ ಸ್ವತ್ತುಗಳ ಪೂರ್ಣ ಹಕ್ಕು ಹಾಗೂ ಅವುಗಳ ರಕ್ಷಣೆಯ ಜವಾಬ್ದಾರಿ ಕಾರ್ಯಕಾರಿ ಸಮಿತಿಯದ್ದಾಗಿರುತ್ತದೆ.
4) ಸಂಘಕ್ಕೆ ಸದಸ್ಯರನ್ನು ಸೇರಿಸಿಕೊಳ್ಳುವ ಹಾಗೂ ಸದಸ್ಯತ್ವದಿಂದ ತೆಗೆದುಹಾಕುವ ಅಧಿಕಾರ ಕಾರ್ಯಕಾರಿ ಸಮಿತಿಗೆ ಇರುತ್ತದೆ.
5) ಸರ್ವ ಸದಸ್ಯರ ಸಭೆಗಳು ನಿರ್ಧರಿಸಿದ ಪ್ರಕಾರ ಯೋಜನೆಗಳನ್ನು ಕಾರ್ಯರೂಪದಲ್ಲಿ ತರುವುದು.
6) ಕಾರ್ಯಕಾರಿ ಸಮಿತಿ ಸದಸ್ಯನ (ಪದಾಧಿಕಾರಿಯ) ಸ್ಥಳವು ನಿಯಮಾನುಸಾರ ತೆರವಾದ 60 ದಿನಗಳಲ್ಲಿ ಕಾರ್ಯಕಾರಿ ಸಮಿತಿಯು ಸಂಘದ ಇತರೇ ಸದಸ್ಯರಲ್ಲೊಬ್ಬನನ್ನು ನೇಮಕಾತಿ ಮಾಡಿ ಕೋ–ಆಪ್ಟ್ ಮೂಲಕ ತುಂಬಬೇಕು.
7) ಸಂಘದ ಪರವಾಗಿ ವ್ಯಾಜ್ಯಗಳನ್ನು ಹೂಡುವುದು ಮತ್ತು ಅವುಗಳನ್ನು ನಡೆಸುವುದು.
8) ಸಂಘದ ಧ್ಯೇಯೋದ್ದೇಶಗಳಿಗೆ ಸಾಧಕವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದು.

**13. ಕಾರ್ಯಕಾರಿ ಸಮಿತಿಯು ಸಭೆಯನ್ನು ಕರೆಯುವ ರೀತಿ :**

ಕಾರ್ಯಕಾರಿ ಸಮಿತಿಯ ಸಾಮಾನ್ಯ ಸಭೆ ಸೇರುವ 7 ದಿನಗಳ ಮೊದಲೇ ಸಮಿತಿಯ ಎಲ್ಲಾ ಸದಸ್ಯರಿಗೂ ಕಾರ್ಯದರ್ಶಿಯವರು ಲೀಖಿತ ನೋಟಿಸು ನೀಡಬೇಕು. ನೋಟಿಸಿನೊಂದಿಗೆ ಸಭೆಯಲ್ಲಿ ಚರ್ಚಿಸಲಾಗುವ ವಿಷಯಗಳ ಪಟ್ಟಿ ನೀಡಬೇಕು. ಕಾರ್ಯಕಾರಿ ಸಮಿತಿಯು ತುರ್ತು ಸಭೆಯನ್ನುಯ ಕರೆಯಲು ಲಿಖಿತ ನೋಟಿಸಿ ಅವಶ್ಯಕತೆ ಇಲ್ಲ. ಮೌಖಿಕವಾಗಿ ಅಥವಾ ದೂರವಾಣಿ ಮೂಲಕ ತಿಳಿಸುವ ಮೂಲಕವೂ ಕರೆಯಬಹುದು. ಈ ಸಭೆಗೆ ಕೋರಂನ ಅವಶ್ಯಕತೆ ಇರುವುದಿಲ್ಲ. ಹಾಜರಿದ್ದ ಸದಸ್ಯರೆ ಅಜೆಂಡಾದಲ್ಲಿನ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಬಹುದು.

**14. ಕಾರ್ಯಕಾರಿ ಸಮಿತಿ ಸಭೆಗೆ ಅವಶ್ಯಕ ಬೇಕಾದ ಸಂಖ್ಯೆ (ಕೋರಂ) :**

1) ಕಾರ್ಯಕಾರಿ ಸಮಿತಿ ಸಭೆಗೆ ಕಾರ್ಯನಿರ್ವಹಣಾಧಿಕಾರ ಇರುವುದಕ್ಕೆ ಸಂಘದ ಒಟ್ಟು ಸದಸ್ಯರ 2/3 ರಷ್ಟು ಸದಸ್ಯರು ಸಭೆಯಲ್ಲಿ ಹಾಜರಿರಬೇಕು. ಸಭೆ ಪ್ರಾರಂಭಕ್ಕೆ ನಿಗಧಿಪಡಿಸಿದ ವೇಳೆಯಿಂದ ಅರ್ಧ ಗಂಟೆಯೊಳಗೆ ಕೋರಂ ಆಗದಿದ್ದರೆ, ಆ ಸಭೆಯನ್ನು ಮುಂದೂಡಬೇಕು.
2) ಮುಂದೂಡಿದ ಸಭೆಯ ಸ್ಥಳ, ದಿನ, ವೇಳೆಯನ್ನು ನೋಟಿಸು ಮೂಲಕ ಸಂಘದ ಎಲ್ಲಾ ಸದಸ್ಯರಿಗೂ ತಿಳಿಸತಕ್ಕದ್ದು. ಮುಂದುಡಿದ ದಿನದಂದು ಕೋರಂ ಇರಲಿ, ಇಲ್ಲದಿರಲಿ ಸಭೆಗೆ ಗೊತ್ತಾಗಿದ್ದ ವಿಷಯಗಳನ್ನು ಚರ್ಚಿಸಿ ತೀರ್ಮಾನ ಕೈಗೊಳ್ಳಲು ಆ ದಿನದಂದು ಹಾಜರಿರುವ ಸದಸ್ಯರಿಗೆ ಅಧಿಕಾರವಿರುತ್ತದೆ.
3) ಕಾರ್ಯಕಾರಿ ಸಮಿತಿಯ ಯಾವೊಬ್ಬ ಸದಸ್ಯನು ಸತತವಾಗಿ ಸಮಿತಿಯ ಮೂರು ಸಭೆಗಳಿಗೆ ಗೈರು ಹಾಜರಾದರೇ, ಅವರ ಸಂಘದ ಸದಸ್ಯತ್ವವು ರದ್ದಾಗುತ್ತದೆ.

**15. ಸರ್ವ ಸದಸ್ಯರ ಮಹಾಸಭೆ ಹಾಗೂ ವಿಶೇಷ ಮಹಾಸಭೆಯ ಕಾರ್ಯ ಕಲಾಪಗಳು :**

1) ಸರ್ವಸದಸ್ಯರ ಮಹಾಸಭೆಯು ಪ್ರತಿ ವರ್ಷ ಸಪ್ಟಂಬರ ತಿಂಗಳ ಒಳಗೆ ಕಡ್ಡಾಯವಾಗಿ ನಡೆಯತಕ್ಕದ್ದು.
2) ಸರ್ವಸದಸ್ಯರ ಮಹಾಸಭೆಯು ಸಂಘದ ಎಲ್ಲಾ ಕಾರ್ಯಕ್ರಮಗಳ ನಿಯಂತ್ರಣಕ್ಕೆ ಪರಮೋಚ್ಚ ಅಧಿಕಾರ ಹೊಂದಿರುತ್ತದೆ.
3) ಸಂಘದ ಸದಸ್ಯರ ದಾಖಲೆ ಪುಸ್ತಕದಲ್ಲಿ ಹೆಸರು ಸೇರ್ಪಡೆಯಾದಂತ ಹಾಗೂ ಮತದಾನಕ್ಕೆ ಅರ್ಹರಾಗಿರುವ ಸದಸ್ಯರು ಮಾತ್ರ ಸರ್ವಸದಸ್ಯರ ಸಭೆಯಲ್ಲಿ ಮತದಾನ ಮಾಡಲು ಹಕ್ಕುಳ್ಳವರಾಗಿರುತ್ತಾರೆ. ಈ ನಿಯಮ ಸರ್ವಸದಸ್ಯರ ಪ್ರಥಮ ಮಹಾಸಭೆಗೆ ಅನ್ವಯಿಸುವುದಿಲ್ಲ.
4) ಸಂಘದ ಹಿಂದಿನ ವರ್ಷದ ಪ್ರಗತಿಯ ಬಗ್ಗೆ ಮಂಡಿಸಿದ ವರದಿಯನ್ನು ವಿಶ್ಲೇಷಿಸಿ ಅನುಮೋದಿಸುವುದು.
5) ಹಿಂದಿನ ವರ್ಷದ ಆರ್ತಿಕ ಸ್ಥಿತಿಗತಿಗಳ ಬಗ್ಗೆ ಚರ್ಚೆ ನಡೆಸಿ, ಜಮಾ–ಖರ್ಚಿನ ವಿವರವನ್ನು ಅನುಮೋದಿಸುವುದು. ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಅಂಗೀಕರಿಸುವುದು.
6) ಚಾಲ್ತಿ ವರ್ಷದ ಅಂದಾಜು ಜಮಾ–ಖರ್ಚಿನ ಪಟ್ಟಿ (ಆಯ–ವ್ಯಯ)ಹಾಗೂ ಯೋಜನೆಗಳ ವಿವರಗಳನ್ನು ಪರಿಶೀಲಿಸಿ ಒಪ್ಪಿಗೆ ಕೊಡುವುದು.
7) ಸಂಘದ ಕಾರ್ಯಕಾರಿ ಸಮಿತಿ ಬದಲಾಗಬೇಕಾದಲ್ಲಿ ಸರ್ವಸದಸ್ಯರ ಸಭೆಯು ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡುವುದು.
8) ಸರ್ವಸದಸ್ಯರ ಸಭೆಯ ಎಲ್ಲಾ ತೀರ್ಮಾನಗಳು ಸದಸ್ಯರ ಬಹುಮತದಿಂದ ಆಗತಕ್ಕದ್ದು. ಅಂದರೆ ಸಭೆಯಲ್ಲಿ ಹಾಜರಿರುವ ಒಟ್ಟು ಸದಸ್ಯರ 3/4 ರಷ್ಟು ಸದಸ್ಯರು ಒಪ್ಪಿಗೆ ಕೊಡತಕ್ಕದ್ದು.

**16. ಸರ್ವ ಸದಸ್ಯರ ಮಹಾಸಭೆ ಹಾಗೂ ವಿಶೇಷ ಮಹಾಸಭೆಯ ನೋಟಿಸಿ ಕಳುಹಿಸುವ ರೀತಿ :**

ಸಂಘದ ಸರ್ವಸದಸ್ಯರ ಮಹಾಸಭೆಗೆ ಮತ್ತು ಸರ್ವಸದಸ್ಯರ ವಿಶೇಷ ಸಭೆಗಳ ಲಿಖಿತ ನೋಟಿಸುಗಳನ್ನು ಸದಸ್ಯರಿಗೆ 21 ದಿನಗಳ ಮೊದಲೇ ಮುದ್ದಾಮ್ ಮುಖಾಂತರ, ಅಂಚೆ ಮೂಲಕ ಕಳುಹಿಸತಕ್ಕದ್ದು. ನೋಟಿಸಿನಲ್ಲಿ ಸಭೆ ನಡೆಯುವ ದಿನ, ವೇಳೆ, ಸ್ಥಳ ಮತ್ತು ಸಭೆಯಲ್ಲಿ ಚರ್ಚಿಸಲಾಗುವ ವಿಷಯಗಳ ಬಗ್ಗೆ ತಿಳಿಸತಕ್ಕದ್ದು.

ಕಾರ್ಯದರ್ಶಿ
ಕಾರ್ಯದರ್ಶಿ
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ

ಹಳೆಯ ವಿದ್ಯಾರ್ಥಿಗಳ ಸಂಘ
ರಾಣೇಬೆನ್ನೂರು
581115.
ಜಿ॥ ಹಾವೇರಿ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ

ಅಧ್ಯಕ್ಷರು
ಅಧ್ಯಕ್ಷರು
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ

**17. ಸರ್ವ ಸದಸ್ಯರ ಮಹಾಸಭೆಗೆ ಅವಶ್ಯಕ ಸಂಖ್ಯೆ (ಕೋರಂ) :**

ಪ್ರತಿಯೊಂದು ವರ್ಷ ಕಾರ್ಯಕಾರಿ ಸಮಿತಿಯ ಮಹಾಸಭೆಯಲ್ಲಿ 2/3 ರಷ್ಟಕ್ಕೆ ಕಡಿಮೆ ಇಲ್ಲದಂತೆ ಸದಸ್ಯರು ಹಾಜರಿರಬೇಕು. ಯಾವ ಸಭೆಯಲ್ಲೆ ಆಗಲಿ ಸಭೆ ಪ್ರರಂಭಕ್ಕೆ ನಿಗದಿಪಡಿಸಿದ ವೇಳೆಯ ಅರ್ಧ ಘಂಟೆಯೊಳಗೆ ಕೋರಂ ಆಗದಿದ್ದಲ್ಲಿ, ಆ ಸಭೆಯನ್ನು ಮುಂದೂಡಬೇಕು. ಮುಂದಿನಸಾರಿ ಸಭೆ ಸೇರುವ ಬಗ್ಗೆ ಪುನ: ಎಲ್ಲಾ ಸದಸ್ಯರಿಗೂ ನೋಟಿಸು ಜ್ಯಾರಿ ಮಾಡತಕ್ಕದ್ದು. ಈ ಸಭೆಗೂ ಕೋರಂ ಇರದಿದ್ದರೆ ಉಪಸ್ಥಿತರಿರುವ ಸದಸ್ಯರೇ ಹಿಂದಿನ ಸಭೆಗೆ ಗೊತ್ತಾಗಿದ್ದ ಕಾರ್ಯವಿವರವನ್ನು ಪರಿಶೀಲಿಸಿ ತೀರ್ಮಾನಿಸಲು ಕಾರ್ಯಕಾರಿ ಸಮಿತಿಗೆ ಅಧಿಕಾರ ಇರುತ್ತದೆ.

**18. ಸಭೆಗಳ ಅಧ್ಯಕ್ಷರಿಗೆ ಹೆಚ್ಚಿನ ಮತಾಧಿಕಾರ (ಕ್ಯಾಸ್ಟಿಂಗ್ ಓಟು) :**

ಸಂಘದ ಯಾವುದೇ ಸಭೆಯಲ್ಲಿ ಅಂದರೆ, ಕಾರ್ಯಕಾರಿ ಸಮಿತಿ ಸಭೆ ಮತ್ತು ಸದಸ್ಯರುಗಳ ಸಭೆಗಳ ಸಭೆಗಳಲ್ಲಿ ಮತದಾನ ನಡೆದಾಗ, ಸಭೆಯ ಅಧ್ಯಕ್ಷತೆ ವಹಿಸಿದವರ ವೈಯಕ್ತಿಕ ಮತವೂ ಸೇರಿ ಸಮ ಸಂಖ್ಯೆ ಮತಗಳು ಬಂದರೆ ಅಧ್ಯಕ್ಷರ ಸ್ಥಾನಕ್ಕೆ ಇರುವ ಮತ (ಕ್ಯಾಸ್ಟಿಂಗ್ ಓಟು) ಕೊಟ್ಟು ವಿಷಯವನ್ನು ನಿರ್ಣಯಿಸಬೇಕು.

**19. ಸಂಘದ ಕಾರ್ಯಾಲಯದ ವೇಳೆ :**

ಸಂಘದ ಕಾರ್ಯಾಲಯದ ವೇಳೆಯನ್ನು ಬೆಳಿಗ್ಗೆ 10–00 ಗಂಟೆಯಿಂದ ಸಾಯಂಕಾಲ 05–00 ಗಂಟೆಯವರೆಗೆ ಕಾರ್ಯನಡೆಸತಕ್ಕದ್ದು. ಹಾಗೂ ವಿರಾಮಕ್ಕಾಗಿ ವೇಳೆಯನ್ನು ಗೊತ್ತುಪಡಿಸತಕ್ಕದ್ದು. ಹಾಗೂ ವೇಳೆಯನ್ನು ಸಂಘಗಳ ನೋಂದಣಾಧಿಕಾರಿಗಳಿಗೆ ತಿಳಿಸಿ ಬದಲಾಯಿಸಿಕೊಳ್ಳಬಹುದು.

**20. ಲೆಕ್ಕ ಪತ್ರಗಳು ಮತ್ತು ಹಣಕಾಸು ವರ್ಷ :**

1) ಸಂಘದ ಆಡಳಿತ ಮತ್ತು ಹಣಕಾಸು ವರ್ಷವು ಎಪ್ರಿಲ್ 01 ರಿಂದ ಮಾರ್ಚ 31 ಕ್ಕೆ ಕೊನೆಗೊಳ್ಳುತ್ತದೆ.
2) ಸಂಘದ ಲೆಕ್ಕ ಪತ್ರಗಳನ್ನು ಲೆಕ್ಕ ಪರಿಶೋಧಕರಿಂದ ಪ್ರತಿ ವರ್ಷವು ಲೆಕ್ಕ ಪರಿಶೋಧನೆ ಮಾಡಿಸಬೇಕು.
3) ಆಡಿಟ್ ಆದ ಅಥಾವೆ ಪತ್ರಿಕೆ ಮತ್ತು ಲೆಕ್ಕಪರಿಶೋಧಕರು ಆ ಬಗ್ಗೆ ಸಲ್ಲಿಸಿದ ವರದಿಯನ್ನು ವಾರ್ಷಿಕ ಮಹಾಸಭೆಯ ಅನುಮತಿ ಪಡೆದ 14 ದಿನಗಳ ಒಳಗೆ ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿ ಹಾಗೂ ಲೆಕ್ಕಪತರಗಳ ವರದಿಯನ್ನು ಸಂಬಂಧಿಸಿದ ನೋಂದಣಿ ಪ್ರಾಧಿಕಾರಕ್ಕೆ ಸಲ್ಲಿಸಬೇಕು.

**21. ಸದಸ್ಯರ ದಾಖಲೆ ಪುಸ್ತಕ ಹಾಗೂ ಇತರ ದಾಖಲೆಗಳು :**

ಸಂಘದ ನೋಂದಾಯಿತ ಕಾರ್ಯಾಲಯದಲ್ಲಿ ಸದಸ್ಯರ ವಿವರಗಳನ್ನೊಳಗೊಂಡ ದಾಖಲೆ ಪುಸ್ತಕವನ್ನು ಇಡತಕ್ಕದ್ದು. ಮತ್ತು ಅದರಲ್ಲಿ ಸದಸ್ಯರ ಹೆಸರು, ವಿಳಾಸ, ಉದ್ಯೋಗ ಮೊದಲಾದ ವಿವರಗಳನ್ನು ನಮೂದಿಸತಕ್ಕದ್ದು. ಖಾತೆ ಪುಸ್ತಕ, ಹೆಸರು, ಸಭೆಗಳ ನಡುವಳಿಕೆ ಪುಸ್ತಕ, ಸಭೆಗಳ ನೋಟಿಸು ಪುಸ್ತಕ, ಆಸ್ತಿಗಳ ಪುಸ್ತಕವನ್ನು ಇಟ್ಟಿರತಕ್ಕದ್ದು. ಮತ್ತು ಷೇರುಗಳ ಪುಸ್ತಕಗಳನ್ನು ಇಡತಕ್ಕದ್ದು.

**22. ನಿಬಂಧನೆಗಳ ತಿದ್ದುಪಡಿ :**

ಸಂಘದ ಮೂಲೋದ್ದೇಶಗಳಾಗಲೀ, ಸಂಘದ ಹೆಸರಾಗಲೀ, ನಿಬಂಧನೆಗಳಾಗಲೀ ಅಥವಾ ಉಪ ನಿಬಂಧನೆಗಳಾಗಲೀ ಇವುಗಳಿಗೆ ವಿರೋಧವಿಲ್ಲದಂತೆ ರಚಿಸಿಕೊಳ್ಳಲು ಅಥವಾ ಬದಲಾಯಿಸುವ ಅಧಿಕಾರವು ವಿಶೇಷ ಸರ್ವಸದಸ್ಯರ ಅಧಿವೇಶನದಲ್ಲಿ ಮಂಡಿಸಿದಾಗ 2/3 ಭಾಗದಷ್ಟು ಸದಸ್ಯರು ಒಪ್ಪಿಗೆ ಕೊಟ್ಟಾಗ ಅಂತವುಗಳನ್ನು ತಿದ್ದುಪಡಿ ಮಾಡಬಹುದು. ಮತ್ತು ಅಳವಡಿಸಿಕೊಳ್ಳಬಹುದು. ಈ ತಿದ್ದುಪಡಿಗಳು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ವಿಧಿ 9, 10 ರ ಕಕ್ಷೆಯಲ್ಲಿ ಬರತಕ್ಕದ್ದು.

**23. ಬ್ಯಾಂಕ ವ್ಯವಹಾರ :**

ಸಂಘದ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಇಲ್ಲವೇ ಸಹಕಾರಿ ಬ್ಯಾಂಕು ಅಥವಾ ಇತರೇ ಆರ್ಥಿಕ ಸಂಸ್ಥೆಗಳ ಖಾತೆಯನ್ನು ತೆಗೆದು, ಆ ಖಾತೆಯಲ್ಲಿ ಸಂಘದ ಹಣವನ್ನು ಜಮಾ ಮಾಡಿ, ಸಂಘದ ಕಾರ್ಯಕ್ರಮಗಳಿಗೆ ಹಣ ಬೇಕಾದಾಗ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಅಥವಾ ಖಜಾಂಚಿ ಇವರಲ್ಲಿ ಇಬ್ಬರ ಜಂಟಿ ಸಹಿಯೊಡನೆ ಹಣವನ್ನು ಪಡೆಯಬಹುದು ಮತ್ತು ಇಡಬಹುದು.

**24. ಪದಾಧಿಕಾರಿಗಳ ಅಧಿಕಾರ ಮತ್ತು ಕರ್ತವ್ಯಗಳು :**

1) **ಅಧ್ಯಕ್ಷರ ಅಧಿಕಾರ ಮತ್ತು ಕರ್ತವ್ಯಗಳು :–** ಅಧ್ಯಕ್ಷರು ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತಾರೆ. ಇವರು ಸಭೆಗಳ ಅಧ್ಯಕ್ಷತೆ ವಹಿಸಿ ಕಾರ್ಯಕಲಾಪಗಳನ್ನು ನಡೆಸಲು ಹಕ್ಕು ಹಾಗೂ ಜವಾಬ್ದಾರಿ ಉಳ್ಳವರಾಗಿರುತ್ತಾರೆ. ಸಂಘದ ಧ್ಯೇಯೋದ್ಧೇಶಗಳ ಸಾಧನೆಗಾಗಿ ಸಂಘದ ಸದಸ್ಯರು ಹಾಗೂ ಸಂಘದಿಂದ ನೇಮಿಸಲ್ಪಟ್ಟ ನೌಕರ ವರ್ಗದವರ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ಮಾಡುವುದು. ಸಂಘದ ಸ್ಥಿರ–ಚರ ಸೊತ್ತುಗಳ ಖರೀದಿ ಮತ್ತು ರಕ್ಷಣೆಯ ಬಗ್ಗೆ ಸಮಯೋಚಿತ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಹೊಂದಿರುತ್ತಾರೆ. ಸಂಘದ ಧ್ಯೇಯೋದ್ಧೇಶಗಳ ಸಾಧನೆ ಹಾಗೂ ಈಡೇರಿಕೆಗಾಗಿ ಸರ್ವಸದಸ್ಯರ ಮಹಾಸಭೆಗಳು ಕೈಗೊಂಡ ಮತ್ತು ಕಾರ್ಯಕಾರಿ ಸಮಿತಿ ಸಭೆಗಳು ಕೈಗೊಂಡ ತೀರ್ಮಾನಗಳನ್ನು ಅನುಷ್ಠಾನಗೊಳಿಸುವಲ್ಲಿ ಮೇಲ್ವಿಚಾರಣೆ ಹಾಗೂ ಸಕ್ರೀಯ ಪಾತ್ರ ವಹಿಸುವುದು.

ಕಾರ್ಯದರ್ಶಿ
ಕಾರ್ಯದರ್ಶಿ
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ

ಹಳೆಯ ವಿದ್ಯಾರ್ಥಿಗಳ ಸಂಘ
ರಾಣೇಬೆನ್ನೂರು
581115.
ಜಿ॥ ಹಾವೇರಿ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ

ಅಧ್ಯಕ್ಷರು
ಅಧ್ಯಕ್ಷರು
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ

ಕಾರ್ಯದರ್ಶಿಯು ನಿಯಮಿತ ಅವಧಿಯಲ್ಲಿ ಕಾರ್ಯಕಾರಿ ಸಮಿತಿ ಸಭೆ ಕರೆಯದಿದ್ದಲ್ಲಿ, ಅಧ್ಯಕ್ಷರೆ ಸಭೆ ಕರೆಯಬೇಕು. ಅಗತ್ಯವಿದ್ದಲ್ಲಿ ಹಾಗೂ ವಿಶೇಷ ಸಂದರ್ಭಗಳಲ್ಲಿ ಕಾರ್ಯಕಾರಿ ಸಮಿತಿಯ ಅಧಿಕಾರವನ್ನು ಚಲಾಯಿಸುವುದು. ಈ ಮೇಲೆ ತಿಳಿಸಿದ ಅಧಿಕಾರ ಹಾಗೂ ಕರ್ತವ್ಯಗಳನ್ನು ಸಂಘದ ಹಿತಾಸಕ್ತಿಗೆ ಯಾವುದೇ ರೀತಿಯಿಂದಲೂ ಧಕ್ಕೆ ಬಾರದ ರೀತಿಯಲ್ಲಿ ಚಲಾಯಿಸಬೇಕು. ಹಾಗೂ ನಿರ್ವಹಿಸಬೇಕು.

2) **ಉಪಾಧ್ಯಕ್ಷರ ಅಧಿಕಾರ ಮತ್ತು ಕರ್ತವ್ಯಗಳು :–** ಉಪಾಧ್ಯಕ್ಷರು ಸಂಘದ ದೈನಂದಿನ ಕೆಲಸಗಳಲ್ಲಿ ಅಧ್ಯಕ್ಷರಿಗೆ ಸಹಾಯ ಮಾಡುವುದು. ಮತ್ತು ಅಧ್ಯಕ್ಷರ ಗೈರು ಹಾಜರಿಯಲ್ಲಿ ಅವರ ದೈನಂದಿನ ಕರ್ತವ್ಯ ನಿರ್ವಹಿಸುವುದು.

3) **ಕಾರ್ಯದರ್ಶಿ ಅಧಿಕಾರ ಮತ್ತು ಕರ್ತವ್ಯಗಳು :–** ಸಂಘದ ಸಭೆಗಳ ಕಾರ್ಯಕಲಾಪಗಳ ನಿರ್ಣಯಗಳನ್ನು ಆಯಾ ನಡುವಳಿಕೆಗಳ ಪುಸ್ತಕಗಳಲ್ಲಿ ದಾಖಲಿಸಿ, ಮುಂದಿನ ಸಭೆಗಳಲ್ಲಿ ದೃಢೀಕರಣ ಪಡೆಯುವುದು. ಸಂಘದ ಲೆಕ್ಕ ಪುಸ್ತಕಗಳು ಇತರೆ ಮಹತ್ವದ ದಾಖಲೆಗಳು, ಕಚೇರಿ ಉಪಕರಣಗಳನ್ನು ಹಾಗೂ ಸಂಘದ ಸ್ಥಿರ–ಚರ ಆಸ್ತಿಗಳ ಪುಸ್ತಕಗಳನ್ನು ವ್ಯವಸ್ಥಿತವಾಗಿ ಇಡುವುದು. ಸಂಘದ ಆಸ್ಥಿಗಳನ್ನು ರಕ್ಷಿಸುವುದು. ಸಂಘದ ಎಲ್ಲಾ ರೀತಿಯ ಸಭೆಗಳ ನೋಟಿಸುಗಳನ್ನು ಕಳುಹಿಸುವುದು. ಸಂಘದ ಎಲ್ಲಾ ರೀತಿಯ ಸಭೆಗಳ ವಿಷಯ ಸೂಚಿಪಟ್ಟಿ ತಯಾರಿಸುವುದು. ಸಂಘದ ಅಧ್ಯಕ್ಷರೊಂದಿಗೆ ಸಮಾಲೋಚಿಸಿ, ಮುಂದಿನ ವರ್ಷದ ಕರಡು ಆಯ–ವ್ಯಯ ಪತ್ರಿಕೆಗಳನ್ನು ತಯಾರು ಮಾಡುವುದು. ಸರ್ವಸದಸ್ಯರ ಸಭೆಗಳು ಹಾಗೂ ಕಾರ್ಯಕಾರಿ ಸಮಿತಿಯ ಸಭೆಗಳ ತೀರ್ಮಾನ ಹಾಗೂ ಮಾರ್ಗದರ್ಶನಕ್ಕೆ ಅನುಗುಣವಾಗಿ ಸಂಘದ ಹಿತಾಸಕ್ತಿಗೆ ಯಾವುದೇ ರೀತಿಯಿಂದಲೂ ಧಕ್ಕೆಬಾರದ ರೀತಿಯಲ್ಲಿ ದೈನಂದಿನ ಆಡಳಿತವನ್ನು ನಿರ್ವಹಿಸುವುದು.

4) **ಸಹ ಕಾರ್ಯದರ್ಶಿ ಅಧಿಕಾರ ಮತ್ತು ಕರ್ತವ್ಯಗಳು :–** ಸಂಘದ ಕಾರ್ಯದರ್ಶಿಯವರ ಗೈರು ಹಾಜರಾತಿಯ ಸಮಯದಲ್ಲಿ ಹಾಗೂ ಸದರಿಯವರ ಅನುಪಸ್ಥಿತಿಯಲ್ಲಿ ಕಾರ್ಯಕಾರಿ ಸಮಿತಿಯ ಸಭೆಗಳ ತೀರ್ಮಾನ ಹಾಗೂ ಮಾರ್ಗದರ್ಶನಕ್ಕೆ ಅನುಗುಣವಾಗಿ ಸಂಸ್ಥೆಯ ಹಿತಾಸಕ್ತಿಗೆ ಯಾವುದೇ ರೀತಿಯಿಂದಲೂ ಧಕ್ಕೆಬಾರದ ರೀತಿಯಲ್ಲಿ ದೈನಂದಿನ ಆಡಳಿತವನ್ನು ನಿರ್ವಹಿಸುವುದು.

5) **ಖಜಾಂಚಿಯವರ ಅಧಿಕಾರ ಮತ್ತು ಕರ್ತವ್ಯಗಳು :–** ಖಜಾಂಚಿಯವರು ಸಾರ್ವಜನಿಕರಿಂದ, ಸರ್ಕಾರದಿಂದ, ಸ್ವಾಯತ್ತ ಸಂಸ್ಥೆಗಳಿಂದ ಬಂದ ಹಾಗೂ ಸದಸ್ಯರಿಂದ ಚಂದಾ ವಸೂಲಿ ಮಾಡಿ ಅದಕ್ಕೆ ರಸೀದಿಯನ್ನು ನೀಡುವುದು. ವಸೂಲಿಯಾದಂತಹ ಮೊಬಲಗನ್ನು ಬ್ಯಾಂಕಿಗೆ ಜಮಾ ಮಾಡುವುದು. ಸಂಬಂಧಪಟ್ಟ ರಸೀದಿಗಳನ್ನು ಕಾರ್ಯದರ್ಶಿಯವರಿಗೆ ಒಪ್ಪಿಸುವುದು. ಲೆಕ್ಕಪತ್ರಗಳನ್ನು ಸಿದ್ಧಪಡಿಸುವುದು ಹಾಗೂ ಲೆಕ್ಕಪರಿಶೋಧಕರಿಗೆ ಅಗತ್ಯವಾದ ವಿವರಗಳನ್ನು, ಜಮಾ–ಖರ್ಚು ತ:ಖ್ತೆಯನ್ನು ಒದಗಿಸುವುದು. ಹಾಗೂ ದೈನಂದಿನ ಇತರೇ ಕರ್ತವ್ಯ ನಿರ್ವಹಿಸುವುದು.

**25. ತಿದ್ದುಪಡಿ :**

ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ವಿಧಿ 9 ಮತ್ತು 10 ಗಳನ್ವಯ ಕ್ರಮ ಕೈಗೊಂಡು ಮೂಲೋದ್ಧೇಶಗಳ ನಿಯಮಗಳು ಹಾಗೂ ನಿಬಂಧನೆಗಳನ್ನು ಅವಶ್ಯವೆನಿಸಿದರೆ ಬದಲಾಯಿಸಬಹುದು. ಇಂತಹ ತಿದ್ದುಪಡಿಯು ನೋಂದಣಾಧಿಕಾರಿಯವರಿಂದ ಅನುಮತಿ ಪಡೆದ ಮೇಲೆ ಜಾರಿಯಲ್ಲಿ ಬರುತ್ತದೆ.

**26. ಸಂಯೋಜನೆ :**

ಸಂಘವನ್ನು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ವಿಧಿ 21 ರನ್ವಯ ಕ್ರಮ ಕೈಗೊಂಡಿರುವ ಬೇರ್ಯಾವುದೇ ನೋಂದಣಿಯಾಗಿರುವ ಸಂಘ–ಸಂಸ್ಥೆಯಲ್ಲಿ ಸೇರ್ಪಡೆ ಮಾಡಲು ನಿರ್ಧರಿಸಬಹುದು.

**27. ವಿಸರ್ಜನೆ :**

ಸಂಘವನ್ನು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ವಿಧಿ 22 ಮತ್ತು 23 ಗಳನ್ವಯ ಕ್ರಮ ಕೈಗೊಂಡು ವಿಸರ್ಜಿಸಬಹುದು.

**28.** ಈ ಸಂಘವನ್ನು ನಿಯಮಾವಳಿಗಳಲ್ಲಿ ಸ್ಪಷ್ಟವಾಗಿ ಹೇಳದಿರುವ ಯಾವುದೇ ಸಂಗತಿಗಳಿಗೂ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ಮತ್ತು ಕರ್ನಾಟಕ ಸಂಘಗಳ ನೋಂದಣಿ ನಿಯಮಾವಳಿಗಳು ಅನ್ವಯಿಸುತ್ತವೆ.

ಕಾರ್ಯದರ್ಶಿ

ಕಾರ್ಯದರ್ಶಿ
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ


ಹಳೆಯ ವಿದ್ಯಾರ್ಥಿಗಳ ಸಂಘ
ರಾಣೇಬೆನ್ನೂರು
581115
ಜಿ॥ ಹಾವೇರಿ

ಅಧ್ಯಕ್ಷರು

ಅಧ್ಯಕ್ಷರು
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ

# ರಾಣೇಬೆನ್ನೂರ ತಾಲೂಕ ಶಿಕ್ಷಣ ಸಂಸ್ಥೆಯ ಪದವಿ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘ (ರಿ) ರಾಣೇಬೆನ್ನೂರು. ತಾ:ರಾಣೇಬೆನ್ನೂರು. ಜಿ:ಹಾವೇರಿ.

## ಕಾರ್ಯಕಾರಿ ಆಡಳಿತ ಮಂಡ

| ಕ್ರ.ಸಂ | ಹೆಸರು ಮತ್ತು ವಿಳಾಸ | ಪದನಾಮ | ವಯಸ್ಸು | | ಸಹಿ |
|---|---|---|---|---|---|
| 1 | ಶ್ರೀ ಬಿ. ಬಿ. ನಂದ್ಯಾಲ ಸಾ॥ನೆಹರು ಮಾರ್ಕೆಟ್, ರಾಣೇಬೆನ್ನೂರು. | ಅಧ್ಯಕ್ಷರು | 72 |  | |
| 2 | ಡಾ॥ ಎಸ್. ಕೆ. ಪಾಟೀಲ ಸಾ॥ಶಬರಿನಗರ, ರಾಣೇಬೆನ್ನೂರು. | ಉಪಾಧ್ಯಕ್ಷರು | 53 |  | |
| 3 | ಶ್ರೀ ದಯಾನಂದ .ಪಾ. ಹರಿಹರ ಸಾ॥ಕುರುಬಗೇರಿ, ರಾಣೇಬೆನ್ನೂರು. | ಕಾರ್ಯದರ್ಶಿ | 40 |  | |
| 4 | ಶ್ರೀ ರವಿ .ಹ. ಪೂಜಾರ ಸಾ॥ಚೌಡೇಶ್ವರಿನಗರ, ರಾಣೇಬೆನ್ನೂರು. | ಸಹ ಕಾರ್ಯದರ್ಶಿ | 45 |  | |
| 5 | ಶ್ರೀ ಬಸವರಾಜ .ಎಂ. ಹುಗ್ಗಿ ಸಾ॥ಹಲಗೇರಿ ರಸ್ತೆ, ರಾಣೇಬೆನ್ನೂರು. | ಖಜಾಂಚಿ | 45 |  | |

ಕಾರ್ಯದರ್ಶಿ

ಕಾರ್ಯದರ್ಶಿ
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ


ಹಳೆಯ ವಿದ್ಯಾರ್ಥಿಗಳ ಸಂಘ
ರಾಣೇಬೆನ್ನೂರು
581115.
ಜಿ॥ ಹಾವೇರಿ

ಅಧ್ಯಕ್ಷರು

ಅಧ್ಯಕ್ಷರು
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ

# ರಾಣೇಬೆನ್ನೂರ ತಾಲೂಕ ಶಿಕ್ಷಣ ಸಂಸ್ಥೆಯ ಪದವಿ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘ (ರಿ)
## ರಾಣೇಬೆನ್ನೂರು. ತಾ:ರಾಣೇಬೆನ್ನೂರು. ಜಿ:ಹಾವೇರಿ.

**ಕಾರ್ಯಕಾರಿ ಆಡಳಿತ ಮಂಡ**

| ಕ್ರ.ಸಂ | ಹೆಸರು ಮತ್ತು ವಿಳಾಸ | ಪದನಾಮ | ವಯಸ್ಸು | | ಸಹಿ |
|---|---|---|---|---|---|
| 6 | ಶ್ರೀ ಕೆ. ಹೆಚ್. ಬ್ಯಾಡಗಿ<br>ಸಾ॥ಈಶ್ವರನಗರ,<br>ರಾಣೇಬೆನ್ನೂರು. | ಸದಸ್ಯರು | 55 |  | |
| 7 | ಶ್ರೀ ಜಿ. ಹೆಚ್. ಪೂಜಾರ<br>ಸಾ॥ತೆಲಗಿ. ತಾ॥ಹರಪನಹಳ್ಳಿ.<br>ಜಿ॥ದಾವಣಗೇರೆ | ಸದಸ್ಯರು | 35 |  | |
| 8 | ಶ್ರೀ ವೀರಣ್ಣ .ವಿ. ಹೂಲಿಹಳ್ಳಿ<br>ಸಾ॥ವಿನಾಯಕನಗರ,<br>ರಾಣೇಬೆನ್ನೂರು. | ಸದಸ್ಯರು | 53 |  | |
| 9 | ಶ್ರೀ ಮಂಜುನಾಥ .ಚ.<br>ಮೂಡಲಗೇರಿ<br>ಸಾ॥ವಿಕಾಸನಗರ,<br>ರಾಣೇಬೆನ್ನೂರು. | ಸದಸ್ಯರು | 33 |  | |

ಕಾರ್ಯದರ್ಶಿ

ಕಾರ್ಯದರ್ಶಿ
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ

ಹಳೆಯ ವಿದ್ಯಾರ್ಥಿಗಳ ಸಂಘ ★ ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ ★ ರಾಣೇಬೆನ್ನೂರು 581115. ಜಿ॥ ಹಾವೇರಿ

ಅಧ್ಯಕ್ಷರು

ಅಧ್ಯಕ್ಷರು
ಹಳೆಯ ವಿದ್ಯಾರ್ಥಿಗಳ ಸಂಘ
ರಾ.ತಾ.ಶಿ. ಸಂಸ್ಥೆಯ ಪದವಿ ಮಹಾವಿದ್ಯಾಲಯ
ರಾಣೇಬೆನ್ನೂರು-581115. ಜಿ॥ ಹಾವೇರಿ